ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **1212/2022**

| | | |
|---|---|---|
| ಸಾಕ್ಷಿಯ ಹೆಸರುಃ | ಗೌತಮ | ಪ್ರಾಸಾಃ 2 |
| ತಂದೆ/ಗಂಡನ ಹೆಸರುಃ | ಮರೆಪ್ಪ | ಚಾಸಾಃ 4 |
| ವಯಸ್ಸು ಃ | 54 ವರ್ಷ | ದಿಃ 12-02-2026 |
| ಉದ್ಯೋಗಃ | ಎ. ಎಸ್.ಐ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು ದಿನಾಂಕಃ 24-05-2022 ರಿಂದ ಇಲ್ಲಿಯವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಎ.ಎಸ್.ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 24-05-2022 ರಂದು ನಾನು, ಚಾಸಾಃ 1, 5, 6 ರವರು ಠಾಣೆಯಲ್ಲಿದ್ದಾಗ ಚಾಸಾಃ 1 ರವರು ಭಾತ್ಮಿ ಬಂದಿರುತ್ತದೆ ದಾಳಿಗೆ ಹೊಗಬೇಕು ಎಂದು ಹೇಳಿರುತ್ತಾರೆ. ಭಾತ್ಮಿ ಬಂದ ಮೇರೆಗೆ ಪಂಚರನ್ನು ಕರೆದುಕೊಂಡು, ಚಾಸಾಃ 4 ರಿಂದ 6 ರವರಿಗೆ ವಿಷಯ ತಿಳಿಸಿ, ಕರಿಬೆಟ್ಟ ಕ್ರಾಸ್ ಹತ್ತಿರ ದೂರದಲ್ಲಿ ನಿಲ್ಲಿಸಿರುತ್ತೇವೆ. ನಂತರ ದಾಳಿ ಮಾಡಿರುತ್ತೇವೆ. 180 ಎಮ್ ಎಲ್ ನ ಟೆಟ್ರಾ ವಿಸ್ಕಿ, 10 ಕಿಂಗ ಫೀಷರ ಬೀಯರ ಸಿಕ್ಕಿರುತ್ತದೆ. ಆರೋಪಿತನಿಗೆ ಸ್ಥಳದಲ್ಲಿ ಸಿಕ್ಕಿರುತ್ತಾನೆ. ಪಂಚರ ಸಮಕ್ಷಮದಲ್ಲಿ ಜಪ್ತಿ ಪಂಚನಾಮೆಯನ್ನು 5.00 ಗಂಟೆಯಿಂದ 6.00 ಗಂಟೆಯವರೆಗೆ ಮಾಡಿರುತ್ತೇವೆ. 2 ಬಾಟಲಿಗಳನ್ನು ಎಫ್. ಎಸ್. ಎಲ್ ವರದಿಗಾಗಿ ಮತ್ತು ತಜ್ಞರ ವರದಿಗಾಗಿ ಪಡೆದುಕೊಂಡಿರುತ್ತೇವೆ. ನಂತರ ಠಾಣೆಗೆ ಬಂದು ಮು. ಮಾ, ಆರೋಪಿ ಮತ್ತು ಜಪ್ತಿ ಪಂಚನಾಮೆಯನ್ನು ಚಾಸಾಃ 8 ರವರ ಮುಂದೆ ಹಾಜರುಪಡಿಸಿರುತ್ತೇವೆ. ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಮು. ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ. ಎಮ್, ಎಚ್. ವಕೀಲರಿಂದ.</u>

1. ಭಾತ್ಮಿ ಬಂದಾಗ ನಾನು ಠಾಣೆಯಲ್ಲಿದೆ. ಚಾಸಾಃ 1 ರವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ಸದರಿ ಪಂಚರು ಠಾಣೆಯ ಖಾಯಂ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ

ಪೊಲಿಸ ಠಾಣೆಯಿಂದ ಕರಿಬೆಗ್ಗ 3 ಕಿ. ಮೀ. ಅಂತರದಲ್ಲಿದೆ. ಠಾಣೆಯಿಂದ 4.00 ಗಂಟೆಗೆ ಹೊರಟು ಕರಿಬೆಟ್ಟ ಕ್ರಾಸ್ ಹತ್ತಿರ 4.45 ಗಂಟೆಗೆ ತಲುಪಿರುತ್ತೇವೆ. ಆರೋಪಿತನು ಮಾರಾಟ ಮಾಡುವುದನ್ನು ನೋಡಿರುತ್ತೇವೆ. ಸ್ಥಳದದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಚಾಸಾಃ 6 ರವರು ಪಂಚನಾಮೆಯನ್ನು ತಯಾರಿಸಿರುತ್ತಾರೆ. ಸದರಿ ಜಪ್ತಿಪಡಿಸಿದ ಮದ್ಯವನ್ನು ಚಾಸಾಃ 1 ರವರು ಪಡೆದಿರುತ್ತಾರೆ. ಮು. ಮಾ. ಮತ್ತು ಆರೋಪಿಗೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ